ವಿಶ್ವವಾಣಿ

**Wednesday 17th April 2024**

## Mr. Santosh RVCE Student cleared UPSC Exam with 641 Rank



# ರಾಜ್ಯಕ್ಕೆ ವಿಜೇತಾ ಫಸ್ಟ್, ಸೌಭಾಗ್ಯ ದ್ವಿತೀಯ

## ವಿಜಯಪುರ ಜಿಲ್ಲೆಯ ವಿಜೇತ ಹೊಸಮನಿಗೆ 100, ಸೌಭಾಗ್ಯಗೆ 101ನೇ ರ್‍ಯಾಂಕ್

**ಬೆಂಗಳೂರು:** ದೇಶದ ಪ್ರತಿಷ್ಠಿತ ಹಾಗೂ ಅತೀ ಕ್ಲಿಷ್ಟಕರ ಯೂನಿಯನ್ ಪಬ್ಲಿಕ್ ಸರ್ವಿಸ್ ಕಮಿಷನ್ (ಯುಪಿಎಸ್‌ಸಿ) ಪರೀಕ್ಷೆ 2023 ರ ಫಲಿತಾಂಶ ಮಂಗಳವಾರ ಪ್ರಕಟಗೊಂಡಿದೆ. ಆದಿತ್ಯ ಆಲ್ ಇಂಡಿಯಾ ನಂಬರ್ 1 ರ್‍ಯಾಂಕರ್ ಆಗಿದ್ದಾರೆ. ಕರ್ನಾಟಕದ ವಿಜೇತ ಹೊಸಮನಿ (100ನೇ ರ್‍ಯಾಂಕ್), ಸಂತೋಷ ಶಿರಡೋಣ (641), ಸೌಭಾಗ್ಯ ಬೀಳಗಿಮಠ (101), ಶಾಂತಪ್ಪ (644) ಸೇರಿದಂತೆ ಇನ್ನಿತರರು ರ್‍ಯಾಂಕ್ ಪಡೆದುಕೊಂಡಿದ್ದಾರೆ.



ಯುಪಿಎಸ್‌ಸಿ ಯಲ್ಲಿ ಹುಬ್ಬಳ್ಳಿಯ ಕೃಪಾ ಜೈನ್ 440ನೇ ಸ್ಥಾನ.

### ವಿಜೇತಾ ಹೊಸಮನಿ 100ನೇ ರ್‍ಯಾಂಕ್

**ವಿಜಯಪುರ:** ಯುಪಿಎಸ್ಸಿ ಪರೀಕ್ಷೆಯಲ್ಲಿ ವಿಜಯಪುರ ಮೂಲದ ವಿಜೇತಾ ಹೊಸಮನಿ 100ನೇ ರ್‍ಯಾಂಕ್, ಸಂತೋಷ ಶಿರಾಡೋಣ 641ನೇ ರ್‍ಯಾಂಕ್‌ಗಳಿಸುವ ಮೂಲಕ ಬಸವನಾಡಿನ ಕೀರ್ತಿ ಹೆಚ್ಚಿಸಿದ್ದಾರೆ.

2020 ರಿಂದ ಮೂರು ಬಾರಿ ಯುಪಿಎಸ್ಸಿ ಪರೀಕ್ಷೆ ಎದುರಿಸಿರುವ ವಿಜೇತಾ ಸತತ ಪ್ರಯತ್ನದ ಫಲವಾಗಿ 2023ರ ಪರೀಕ್ಷೆಯಲ್ಲಿ ಪೂರ್ವಭಾವಿ, ಮುಖ್ಯ ಪರೀಕ್ಷೆ, ಸಂದರ್ಶನ ಪಾಸು ಮಾಡಿ ಆಲ್ ಇಂಡಿಯಾ 100ನೇ ರ್‍ಯಾಂಕ್ ಪಡೆದಿದ್ದಾರೆ.

ಪ್ರಿಲಿಮಿನರಿ ಪರೀಕ್ಷೆ ,ಮೇನ್ ಪರೀಕ್ಷೆ ಯಶಸ್ವಿಯಾಗಿ ಪಾಸು ಮಾಡಿ ಯುಪಿಎಸ್ ಪರೀಕ್ಷೆಯಲ್ಲಿ ಅತ್ಯುತ್ತಮ ರ್‍ಯಾಂಕ್ ಗಳಿಸಿದ್ದಾರೆ. ವಿಶೇಷವಾಗಿ ಆನ್ಲೈನ್ ತರಬೇತಿ ಹಾಗೂ ಮನೆಯಲ್ಲೇ ಹೆಚ್ಚಿನ ಅಭ್ಯಾಸ ಮಾಡಿ ಸಾಧನೆ ಮಾಡಿರುವ ವಿಜೇತಾ ಅವರಿಗೆ ಇಂಡಿಯನ್ ರೆವೆನ್ಯೂ ಸರ್ವೀಸ್ ನಲ್ಲಿ ಸ್ಥಾನ ಸಿಗುವ ಸಾಧ್ಯತೆ ಇದೆ. ಹುಬ್ಬಳ್ಳಿಯಲ್ಲಿ ನೆಲೆಸಿರುವ ವಿಜೇತಾ ಭೀಮಸೇನ ಹೊಸಮನಿಯವರು ವಿಜಯಪುರದ ಸೈನಿಕ ಶಾಲೆಯ ಶಿಶುನಿಕೇತನದಲ್ಲಿ ಅಭ್ಯಾಸ. 6 ರಿಂದ 10 ನೇ ತರಗತಿವರೆಗೆ ಬಾಗಲಕೋಟೆಯ ಬಸವೇಶ್ವರ ಇಂಟರ್ ನ್ಯಾಷನಲ್ ಪಬ್ಲಿಕ್ ಸ್ಕೂಲ್, ವಿಜಯಪುರದ ತುಂಗಳ ಕಾಲೇಜಿನಲ್ಲಿ ಪ್ರಥಮ ಪಿಯುಸಿ, ದರಬಾರ್ ಕಾಲೇಜ್‌ನಲ್ಲಿ ದ್ವಿತೀಯ ಪಿಯುಸಿ ಪೂರ್ಣಗೊಳಿಸಿ ಗುಜರಾತಿನ ನ್ಯಾಷನಲ್ ಲಾ ಯುನಿವರ್ಸಿಟಿಯಲ್ಲಿ ಬಿಎಎಲ್ ಎಲ್ ಪದವಿ ಹಾಗೂ ಕ್ರಿಮಿನಲ್ ಲಾ ದಲ್ಲಿ ಗೋಲ್ಡ್ ಮೆಡಲ್ ಪಡೆಕೊಂಡಿದ್ದಾರೆ.



### ಸಂತೋಷ 641ನೇ ರ್‍ಯಾಂಕ್

ಯುಪಿಎಸ್‌ಸಿ ಯಲ್ಲಿ 641 ರ್‍ಯಾಂಕ್ ಪಡೆದ ಸಂತೋಷ ಶ್ರೀಕಾಂತ್ ಶಿರಾಡೋಣ ಅವರು ನಗರದ ಸೈನಿಕ ಶಾಲೆಯ ಶಿಶುನಿಕೇತನ ಶಾಲೆಯಲ್ಲಿ 1-5 ನೇ ತರಗತಿ, ಗದಗ ತಾಲೂಕಿನ ಹುಲಕೋಟಿಯ ರಾಜರಾಜೇಶ್ವರಿ ಪ್ರೌಢ ಶಾಲೆಯಲ್ಲಿ 6-8 ನೇ ತರಗತಿ, ವಿಜಯಪುರ ತಾಲೂಕಿನ ಕಗ್ಗೋಡದ ಸಂಗನಬಸವ ಇಂಟರ್ ನ್ಯಾಷನಲ್ ಸ್ಕೂಲ್ ನಲ್ಲಿ 8-10 ನೇ ತರಗತಿ ಮುಗಿಸಿ, ಪಿಯುಸಿಯನ್ನು ಹೈದರಾಬಾದಿನ ವಿಜೇತನಾ ಕಾಲೇಜು, ಬೆಂಗಳೂರಿನ ಆರ್ ವಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಕಂಪ್ಯೂಟರ್ ಸೈನ್ಸ್ ಪದವಿ ಪಡೆದು 2019 ರಿಂದ ಯುಪಿಎಸ್ಸಿ ಪ್ರಯತ್ನ ನಡೆಸುತ್ತಿದ್ದು, 2023 ರಲ್ಲಿ ಉತ್ತೀರ್ಣರಾಗಿ ಸಾಧನೆ ತೋರಿದ್ದಾರೆ. ದೆಹಲಿಯ ವಾದಿರಾಮ್ ಕೋಚಿಂಗ್ ಸೆಂಟರ್ ನಲ್ಲಿ ತರಬೇತಿ ಪಡೆದಿದ್ದ ಸಂತೋಷ ಅವರ ಸಾಧನೆಗೆ ಕುಟುಂಬಸ್ಥರು ಹಾಗೂ ಸ್ನೇಹಿತರಲ್ಲಿ ಅಪಾರ ಸಂತಸವನ್ನುಂಟು ಮಾಡಿದೆ.

### ಶಾಂತಪ್ಪ ಕುರುಬರಗೆ 644ನೇ ರ್‍ಯಾಂಕ್
### ಕನ್ನಡದಲ್ಲಿ ಪರೀಕ್ಷೆ ಬರೆದು ಪಾಸ್

ಬಳ್ಳಾರಿ ಜಿಲ್ಲೆ ಕುರಗೋಡು ತಾಲೂಕಿನ ಗೆಣಿಕಿಹಾಳು ಗ್ರಾಮದ ಶಾಂತಪ್ಪ ಕುರುಬರ 644ನೇ ರ್‍ಯಾಂಕ್ ಪಡೆದಿದ್ದಾರೆ. ಸದ್ಯ ಇವರು ಬೆಂಗಳೂರು ನಗರ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಸಬ್ ಇನ್‌ಸ್ಪೆಕ್ಟರ್ ಹುದ್ದೆಯಲ್ಲಿ ಕರ್ತವ್ಯದಲ್ಲಿದ್ದಾರೆ. ತಮ್ಮ 8ನೇ ಪ್ರಯತ್ನದಲ್ಲಿ ತೇರ್ಗಡೆಯಾಗಿದ್ದಾರೆ. ಶಾಂತಪ್ಪ ಕುರುಬರ ಅವರು ಕೋವಿಡ್ ಸಂದರ್ಭದಲ್ಲಿ ಕೊಳಗೇರಿ ಮಕ್ಕಳಿಗೆ ಪಾಠ ಹೇಳಿಕೊಡುತ್ತಿದ್ದರು. ಬೆಂಗಳೂರು ತುಮಕೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಿಸಲು ಇವರು ಪ್ರಚಾರ ನಡೆಸಿದ್ದರು. ತಮ್ಮ ಸ್ವಂತ ಹಣದಲ್ಲಿ ಗೊರಗುಂಟೆಪಾಳ್ಯದಲ್ಲಿ ಶೌಚಾಲಯ ನಿರ್ಮಿಸಿ ತೃತೀಯ ಲಿಂಗಿಯೊಬ್ಬರಿಂದ ಉದ್ಘಾಟನೆ ಮಾಡಿಸಿದ್ದರು.



**ಎಸ್ಸೆಸ್ಸೆಲ್ಸಿಯಲ್ಲಿ ಸಾಮಾನ್ಯ ವಿದ್ಯಾರ್ಥಿ:**
ಶಾಂತಪ್ಪ ಅವರು ಕುರುಗೋಡಿನ ಗೆಣಿಕೆಹಾಳು ಗ್ರಾಮದ ಸರಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಣ ಪಡೆದಿದ್ದರು. ಬಳ್ಳಾರಿ ಸರ್ಕಾರಿ ಮುನ್ಸಿಪಲ್ ಕಾಲೇಜಿನಲ್ಲಿ ಪಿಯು ಶಿಕ್ಷಣ ಮತ್ತು ಬಳ್ಳಾರಿ ವೀರಶೈವ ಕಾಲೇಜಿನಲ್ಲಿ ಬಿಎಸ್ಸಿ ಶಿಕ್ಷಣ ಪಡೆದಿದ್ದರು. ಎಸ್ಸೆಸ್ಸೆಲ್ಸಿಯಲ್ಲಿ ಮೊದಲ ಪ್ರಯತ್ನ ಮತ್ತು ಪಿಯುಸಿ ಎರಡನೇ ಪ್ರಯತ್ನದಲ್ಲಿ ಉತ್ತೀರ್ಣರಾಗಿದ್ದರು. ಬಿಎಸ್ಸಿಯಲ್ಲಿ ಶೇ 78ರಷ್ಟು ಅಂಕಪಡೆದಿದ್ದು ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಲು ಅವರಿಗೆ ಸ್ಫೂರ್ತಿಯಾಗಿತ್ತು.

### ಸೌಭಾಗ್ಯಗೆ 101ನೇ ರ್‍ಯಾಂಕ್

**ಧಾರವಾಡ:** ನಗರದ ಕೃಷಿ ವಿಶ್ವವಿದ್ಯಾಲಯದ ಪದವೀಧರೆ ಸೌಭಾಗ್ಯ ಬೀಳಗಿಮಠ ಅವರು 101ನೇ ರ್‍ಯಾಂಕ್ ಬಂದಿದ್ದಾರೆ. ಸೌಭಾಗ್ಯ ಅವರು ದಾವಣಗೆರೆಯ ವರು. ಶರಣಯ್ಯ ಸ್ವಾಮಿ ಮತ್ತು ಶರಣಮ್ಮ ದಂಪತಿಯ ಪುತ್ರಿ. ಶರಣಯ್ಯ ಅವರು ನರ್ಸರಿ ನಡೆಸುತ್ತಿದ್ದಾರೆ, ಶರಣಮ್ಮ ಅವರು ಗೃಹಿಣಿ. ಸೌಭಾಗ್ಯ ಅವರು ಎರಡನೇ ಪ್ರಯತ್ನದಲ್ಲಿ ಯುಪಿಎಸ್‌ಸಿ ಪರೀಕ್ಷೆಯಲ್ಲಿ ಯಶಸ್ವಿಯಾಗಿದ್ದಾರೆ. ಯಾವುದೇ ಕೇಂದ್ರದಲ್ಲಿ ಕೋಚಿಂಗ್ ಪಡೆದಿರಲಿಲ್ಲ, ಆನ್‌ಲೈನ್ ಮಾಕ್ ಟೆಸ್ಟ್ ಸರಣಿ ಅಟೆಂಡ್ ಮಾಡಿದ್ದೆ ಅಷ್ಟೆ, ಬೋಧಕಿ ಅಶ್ವಿನಿ ಎಂ.ಅವರು ಪರೀಕ್ಷೆ ತಯಾರಿಗೆ ಮಾರ್ಗದರ್ಶನ ನೀಡಿದರು ಎಂದು ತಿಳಿಸಿದರು.

